# Akashvani : Bangalore
# National Bulletin In Kannada
# 27.09.2024 / 19.35 hrs

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

# 27.09.2024 / 19.35 hrs

**<><*<><>*><>**

<u>ಮುಖ್ಯಾಂಶಗಳು</u>

೧. ಪ್ರವಾಸೋದ್ಯಮದಿಂದ ಮಾನವೀಯ ಸಂಬಂಧಗಳಿಗೆ ಶಾಂತಿಯ ಬೆಸುಗೆ- ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್

೨. ಭಾರತ - ಉಜ್ಬೇಕಿಸ್ತಾನ್ ನಡುವೆ ದ್ವಿಪಕ್ಷೀಯ ಬಂಡವಾಳ ಹೂಡಿಕೆ ಒಪ್ಪಂದ

೩. ಮಹಾರಾಷ್ಟ್ರ ವಿಧಾಸಭಾ ಚುನಾವಣೆ; ಕೇಂದ್ರ ಚುನಾವಣಾ ಆಯೋಗದಿಂದ ಸಿದ್ಧತೆ ಪರಿಶೀಲನೆ

೪. ಮೆಕಾವ್ ಮುಕ್ತ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್; ಭಾರತದ ತ್ರೀಷಾ ಜೋಲಿ - ಗಾಯತ್ರಿ ಗೋಪಿಚಂದ್ ಜೋಡಿ ಸೆಮಿಫೈನಲ್ಸ್‌ಗೆ

**<><*<><>*><>**

ಪ್ರವಾಸೋದ್ದಿಮೆ, ಇಂದಿನ ಸಂದರ್ಭಕ್ಕೆ ಅತ್ಯಗತ್ಯವಾದ ಮಾನವೀಯ ಸಂಬಂಧಗಳನ್ನು ಬೆಸೆಯುತ್ತದೆ ಎಂದು ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಹೇಳಿದ್ದಾರೆ. 'ವಿಶ್ವ ಪ್ರವಾಸೋದ್ಯಮ ದಿನ'ದ ಅಂಗವಾಗಿ ನವದೆಹಲಿಯಲ್ಲಿಂದು ಏರ್ಪಡಿಸಿದ್ದ ಸಮಾರಂಭದಲ್ಲಿ ಮಾತನಾಡಿದ ಉಪರಾಷ್ಟ್ರಪತಿಯವರು, ಪ್ರವಾಸೋದ್ದಿಮೆ, ಶಾಂತಿ-ಸೌಹಾರ್ದತೆಗೂ ಕೊಡುಗೆ ನೀಡುತ್ತದೆ; ವಿಶ್ವದಲ್ಲಿ ಎಲ್ಲೇ ಸಂಘರ್ಷ ಇದ್ದರೂ ಅದು ಪ್ರತಿ ಭಾಗದಲ್ಲಿಯೂ ಅಶಾಂತಿಗೆ ಕಾರಣವಾಗುತ್ತದೆ. ಈ ನಿಟ್ಟಿನಲ್ಲಿ ಪ್ರವಾಸೋದ್ದಿಮೆ, ಜನರಲ್ಲಿ ಶಾಂತಿಯ ಬೆಸುಗೆ ರೂಪಿಸುತ್ತದೆ ಎಂದರು. 'ಪ್ರವಾಸೋದ್ದಿಮೆ ಮತ್ತು ಶಾಂತಿ' ಎನ್ನುವ ಈ ವರ್ಷದ ಘೋಷವಾಕ್ಯ ಅತ್ಯಂತ ಸಮಯೋಚಿತ ಹಾಗೂ ಸಮರ್ಪಕವಾಗಿದೆ ಎಂದು ಹೇಳಿದ ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಜಾಗತಿಕ, ಆರ್ಥಿಕ ಅಭಿವೃದ್ಧಿ, ಸಾಮಾಜಿಕ ಪ್ರಗತಿ ಮತ್ತು ಸಾಂಸ್ಕೃತಿಕ ವಿನಿಮಯಕ್ಕೆ ಪ್ರವಾಸೋದ್ದಿಮೆ ಅವಕಾಶ ನೀಡುತ್ತದೆ ಎಂದರು. ಪ್ರವಾಸೋದ್ದಿಮೆ ಖಾತೆ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಮಾತನಾಡಿ, ದೇಶದಲ್ಲಿ ಪ್ರವಾಸೋದ್ಯಮದ ಸರ್ವಾಂಗೀಣ ಅಭಿವೃದ್ಧಿಗೆ ಸಮರ್ಪಿತವಾದ ಪ್ರಮುಖ ಪಟ್ಟಿಯೊಂದನ್ನು ಸದ್ಯದಲ್ಲೇ ಬಿಡುಗಡೆ ಮಾಡಲಾಗುವುದು ಎಂದು ಪ್ರಕಟಿಸಿದರು. ಕೇಂದ್ರ ಪ್ರವಾಸೋದ್ಯಮ ಸಚಿವಾಲಯ ಕೈಗೊಂಡಿರುವ- ಪರ್ಯಟನ ಮಿತ್ರ, ಅತ್ಯುತ್ತಮ ಪ್ರವಾಸೋದ್ಯಮ ಗ್ರಾಮ ಸ್ಪರ್ಧೆ, ಉದ್ದಿಮೆ ಸಹಭಾಗಿತ್ವದ ಆತಿಥ್ಯ ಸರಪಳಿ ಮೊದಲಾದ ಉಪಕ್ರಮಗಳಿಗೆ ಚಾಲನೆ ನೀಡಿದ ಉಪರಾಷ್ಟ್ರಪತಿಯವರು, ಪ್ರವಾಸೋದ್ದಿಮೆ ಕೈಪಿಡಿ ಬಿಡುಗಡೆ ಮಾಡಿದರು.

**<><*<><>*><>**

ವಿಶ್ವ ಪ್ರವಾಸೋದ್ಯಮ ದಿನದ ಅಂಗವಾಗಿ ಪುದುಚೆರಿಯಲ್ಲಿ ವ್ಯವಸ್ಥೆ ಮಾಡಲಾಗಿದ್ದ ಕಾರ್ಯಕ್ರಮವನ್ನು ಪುದುಚೆರಿ ಲೆಫ್ಟಿನೆಂಟ್ ಗವರ್ನರ್ ಕೈಲಾಶ್‌ನಾಥ್ ಮತ್ತು ಮುಖ್ಯಮಂತ್ರಿ ರಂಗಸಾಮಿ ಉದ್ಘಾಟಿಸಿದರು. ಎರಡು ದಿನಗಳ ಈ ಉತ್ಸವದಲ್ಲಿ ಸಾಂಸ್ಕೃತಿಕ ಪರಂಪರೆ ಮತ್ತು ಪ್ರವಾಸೋದ್ಯಮ ಅವಕಾಶಗಳ ಬಗ್ಗೆ ವಿವಿಧ ಕಾರ್ಯಕ್ರಮ ಏರ್ಪಡಿಸಲಾಗಿದೆ.

**<><*<><>*><>**

ಕರ್ನಾಟಕದ ಗದುಗಿನ ಐತಿಹಾಸಿಕ ಪ್ರಸಿದ್ಧ ಶ್ರೀ ವೀರ ನಾರಾಯಣದೇವಸ್ಥಾನದಲ್ಲಿ ನಡೆದ ಸಮಾರಂಭದಲ್ಲಿ ಪ್ರವಾಸೋದ್ಯಮ ಸಚಿವ ಹೆಚ್.ಕೆ. ಪಾಟೀಲ್, ವಿಶ್ವ ಪ್ರವಾಸೋದ್ಯಮ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಅವರು ಮಾತನಾಡಿ, ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ರಾಜ್ಯ ಸರ್ಕಾರ ಹೊಸ ಪ್ರವಾಸೋದ್ಯಮ ನೀತಿ ಜಾರಿಗೊಳಿಸಲು ಬದ್ಧವಾಗಿದೆ ಎಂದರು. ಗದಗ ಜಿಲ್ಲೆಯ ಲಕ್ಕುಂಡಿ ಗ್ರಾಮದಲ್ಲಿರುವ ಸ್ಮಾರಕಗಳನ್ನು ವಿಶ್ವ ಪಾರಂಪರಿಕ ಪಟ್ಟಿಗೆ ಸೇರಿಸುವಂತೆ ರಾಜ್ಯ ಸರಕಾರ ಯುನೆಸ್ಕೋಗೆ ಪ್ರಸ್ತಾವನೆ ಸಲ್ಲಿಸಲಿದೆ ಎಂದು ಸಚಿವ ಎಚ್.ಕೆ.ಪಾಟೀಲ್ ತಿಳಿಸಿದರು.

<><*<><>*><>

ಭಾರತ ಮತ್ತು ಉಜ್ಬೇಕಿಸ್ತಾನ್, ದ್ವಿಪಕ್ಷೀಯ ಬಂಡವಾಳ ಹೂಡಿಕೆ ಒಪ್ಪಂದಕ್ಕೆ ಇಂದು ಸಹಿ ಹಾಕಿವೆ. ಭಾರತದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಉಜ್ಬೇಕಿಸ್ತಾನದ ಉಪಪ್ರಧಾನಮಂತ್ರಿ ಕೋಡ್‌ಜಾಯೇವ್ ಜಮ್‌ಶಿದ್ ಅಬ್ದುಖಾಕಿಮೊವಿಚ್ ತಾಷ್ಕೆಂಟ್‌ನಲ್ಲಿಂದು ಈ ಒಪ್ಪಂದಕ್ಕೆ ಸಹಿ ಹಾಕಿದರು. ಈ ಒಪ್ಪಂದ ಭಾರತದಲ್ಲಿ ಬಂಡವಾಳ ಹೂಡುವ ಉಜ್ಬೇಕಿಸ್ತಾನ್ ವ್ಯಾಪಾರಸ್ಥರಿಗೆ ಹಾಗೂ ಉಜ್ಬೇಕಿಸ್ತಾನದಲ್ಲಿ ಬಂಡವಾಳ ಹೂಡುವ ಭಾರತೀಯ ವ್ಯಾಪಾರಸ್ಥರಿಗೆ ಅಂತಾರಾಷ್ಟ್ರೀಯ ಅನುಸರಣೆ ಅನ್ವಯ ಸೂಕ್ತ ರಕ್ಷಣೆಯನ್ನು ಖಾತರಿಪಡಿಸುತ್ತದೆ. ಈ ಒಪ್ಪಂದ ದ್ವಿಪಕ್ಷೀಯ ಆರ್ಥಿಕ ಸಹಕಾರವನ್ನು ಹೆಚ್ಚಿಸುವ ಉಭಯ ದೇಶಗಳ ಬದ್ಧತೆಗೆ ಸಾಕ್ಷಿಯಾಗಿದೆ ಎಂದು ಹಣಕಾಸು ಇಲಾಖೆ ತಿಳಿಸಿದೆ.

<><*<><>*><>

ಹರಿಯಾಣ ವಿಧಾನಸಭಾ ಮತಕ್ಷೇತ್ರಗಳಲ್ಲಿ ಹಾಗೂ ಜಮ್ಮು-ಕಾಶ್ಮೀರದ ಮೂರನೇ ಹಂತದ ಚುನಾವಣೆ ನಡೆಯಲಿರುವ ವಿಧಾನಸಭಾಕ್ಷೇತ್ರಗಳಲ್ಲಿ ವಿವಿಧ ರಾಜಕೀಯ ಪಕ್ಷಗಳಿಂದ ಭರದ ಪ್ರಚಾರ ನಡೆಯುತ್ತಿದೆ. ಬಿಜೆಪಿ ಹಿರಿಯ ಧುರೀಣ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು, ಹರಿಯಾಣದ ರಿವಾರಿಯಲ್ಲಿಂದು ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದರು. ಕಾಂಗ್ರೆಸ್ ಪಕ್ಷಕ್ಕೆ ರಾಜ್ಯದ ಸರ್ವಾಂಗೀಣ ಅಭಿವೃದ್ಧಿ ಸಾಧಿಸುವ ಸಾಮರ್ಥ್ಯವಿಲ್ಲ ಎಂದು ಅಮಿತ್ ಶಾ ಟೀಕಿಸಿದರು. ಅಮಿತ್ ಶಾ ಅವರು, ಬಿಜೆಪಿ ನಾಯಕ ಹಾಗೂ ಮುಖ್ಯಮಂತ್ರಿ ನಯಾಬ್ ಸಿಂಘ್ ಸೈನಿ, ಸ್ಪರ್ಧಿಸಿರುವ ಲಡ್ವ ಮತಕ್ಷೇತ್ರದಲ್ಲಿಯೂ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಲಿದ್ದಾರೆ. ಕಾಂಗ್ರೆಸ್ ಧುರೀಣ ಹಾಗೂ ಮಾಜಿ ಮುಖ್ಯಮಂತ್ರಿ ಭೂಪಿಂದರ್ ಹೂಡಾ ಅವರು, ಕುರುಕ್ಷೇತ್ರ ಜಿಲ್ಲೆಯ ಥಾನೇಸರ್‌ನಲ್ಲಿ ಪ್ರಚಾರ ಕೈಗೊಂಡಿದ್ದಾರೆ. ಮತ್ತೊಬ್ಬ ನಾಯಕಿ ಕುಮಾರಿ ಸೆಲ್ಜಾ ಗೋರಿವಾಲ ಮತ್ತು ಕೈರ್‌ಪುರ್ ಗ್ರಾಮಗಳಲ್ಲಿ ಪಕ್ಷದ ಅಭ್ಯರ್ಥಿಪರ ಮತಯಾಚನೆ ಕೈಗೊಂಡಿದ್ದಾರೆ. ಆಮ್‌ಆದ್ಮಿ ಪಕ್ಷದ ನಾಯಕರು ಹಾಗೂ ಇತರ ಪ್ರಾದೇಶಿಕ ಪಕ್ಷಗಳ ಧುರೀಣರು ತಮ್ಮ ಅಭ್ಯರ್ಥಿಗಳ ಪರ ವ್ಯಾಪಕ ಪ್ರಚಾರ ನಡೆಸಲಿದ್ದಾರೆ.

<><*<><>*><>

ಜಮ್ಮು ಮತ್ತು ಕಾಶ್ಮೀರದ ೨೬ ವಿಧಾನಸಭಾ ಕ್ಷೇತ್ರಗಳಲ್ಲಿ ನಡೆದ ಎರಡನೇ ಹಂತದ ಚುನಾವಣೆಯಲ್ಲಿ ಶೇಕಡ ೫೭ ಪಾಯಿಂಟ್ ೩೧ ರಷ್ಟು ಮತದಾನವಾಗಿದೆ. ಶೇಕಡ ೫೮ ಪಾಯಿಂಟ್ ೩೫ ರಷ್ಟು ಪುರುಷರು ಹಾಗೂ ಶೇಕಡ ೫೬ ಪಾಯಿಂಟ್ ೨೨ ರಷ್ಟು ಮಹಿಳೆಯರು ಮತದಾನ ಮಾಡಿದ್ದಾರೆ ಎಂದು ಚುನಾವಣಾ ಆಯೋಗ ತಿಳಿಸಿದೆ. ಎರಡನೇ ಹಂತದಲ್ಲಿ ಶ್ರೀಮಾತಾ ವೈಷ್ಣೋದೇವಿ ವಿಧಾನಸಭಾ ಕ್ಷೇತ್ರದಲ್ಲಿ ಅತ್ಯಧಿಕ ಅಂದರೆ ಶೇಕಡ ೮೦.೪೫ ರಷ್ಟು ಮತದಾನವಾಗಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಮೂರನೇ ಹಾಗೂ ಅಂತಿಮ ಹಂತದ ಮತದಾನ ಅಕ್ಟೋಬರ್ ೧ ರಂದು ನಡೆಯಲಿದೆ. ಮತ ಎಣಿಕೆ ಅಕ್ಟೋಬರ್ ೮ ರಂದು ನಡೆಯಲಿದೆ.

<><*<><>*><>

ಆಯುಷ್ ವ್ಯವಸ್ಥೆಯನ್ನು ಜಾಗತಿಕ ಆರೋಗ್ಯ ಉಪಚಾರದ ವ್ಯವಸ್ಥೆಯೊಡನೆ ಸಮನ್ವಯಗೊಳಿಸಿ ಸುಧಾರಿಸಲು ವಿಶ್ವ ಆರೋಗ್ಯ ಸಂಸ್ಥೆಯೊಡನೆ ಒಪ್ಪಂದವೊಂದಕ್ಕೆ ಸಹಿ ಹಾಕಲಾಗಿದೆ ಎಂದು ಕೇಂದ್ರ ಆಯುಷ್ ಸಚಿವ ಪ್ರತಾಪ್ ರಾವ್

ಜಾದವ್ ಹೇಳಿದ್ದಾರೆ. ಅವರು, ಸರ್ಕಾರದ ನೂರು ದಿನಗಳ ಸಾಧನೆ ಕುರಿತಂತೆ ನವದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಆಯುಷ್ ಔಷಧಿಗಳ ಲಭ್ಯತೆಯನ್ನು ಖಾತರಿಪಡಿಸಲು ಪ್ರತಿ ತಹಸಿಲ್ ಮಟ್ಟದಲ್ಲಿ ವಿಶೇಷ ಔಷಧ ಕೇಂದ್ರ ತೆರೆಯಲು ಸರ್ಕಾರ ಉದ್ದೇಶಿಸಿದೆ ಎಂದು ತಿಳಿಸಿದರು. ಸಾಂಪ್ರದಾಯಿಕ ಗಿಡಮೂಲಿಕೆ ಔಷಧ ಕುರಿತಂತೆ ವಿಯಟ್ನಾಮ್ ಜೊತೆಗೆ ಔಷಧೀಯ ಸಸ್ಯಗಳ ಒಪ್ಪಂದ ಮಾಡಿಕೊಳ್ಳಲಾಗಿದೆ; ಆಯುರ್ವೇದ ಕುರಿತಂತೆ ಜ್ಞಾನ ವಿನಿಮಯ ಹಾಗೂ ಸಂಶೋಧನೆಗಾಗಿ ಮಲೇಷಿಯಾದೊಂದಿಗೆ ತಿಳುವಳಿಕೆ ಪತ್ರಕ್ಕೆ ಸಹಿ ಹಾಕಲಾಗಿದೆ. ಸರ್ಕಾರ ಜನರ ಆರೋಗ್ಯ ಮತ್ತು ಕಲ್ಯಾಣದ ಉಪಕ್ರಮಗಳಿಗೆ ಬದ್ಧವಾಗಿದೆ ಎಂದು ಸಚಿವ ಪ್ರತಾಪ್ ರಾವ್ ಜಾದವ್ ಹೇಳಿದರು.

<><*<><>*><>

ಮಹಾರಾಷ್ಟ್ರದಲ್ಲಿ ಮುಂಬರುವ ವಿಧಾನಸಭಾ ಚುನಾವಣೆಗಾಗಿ ನಡೆದಿರುವ ಸಿದ್ಧತೆಯನ್ನು ಕೇಂದ್ರ ಚುನಾವಣಾ ಆಯೋಗ ಪರಿಶೀಲಿಸುತ್ತಿದೆ. ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ನೇತೃತ್ವದ ತಂಡ, ನಿನ್ನೆ ಮುಂಬೈಗೆ ಆಗಮಿಸಿದ್ದು, ಚುನಾವಣೆಗೆ ಸಂಬಂಧಪಟ್ಟವರೊಂದಿಗೆ ಸಮಾಲೋಚನೆ ನಡೆಸುತ್ತಿದೆ. ವಿವಿಧ ರಾಜಕೀಯ ಪಕ್ಷಗಳು, ಸರ್ಕಾರಿ ಅಧಿಕಾರಿಗಳು, ಜಿಲ್ಲಾಧಿಕಾರಿಗಳೊಂದಿಗೆ ಸಭೆ ನಡೆಸಲಾಗುತ್ತಿದೆ.

<><*<><>*><>

ಕರ್ನಾಟಕದಲ್ಲಿ ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರಿನ ಲೋಕಾಯುಕ್ತ ಪೊಲೀಸ್, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿದೆ. ಎಫ್‌ಐಆರ್‌ನಲ್ಲಿ ಸಿದ್ದರಾಮಯ್ಯ ಅವರನ್ನು ಮೊದಲ ಆರೋಪಿಯನ್ನಾಗಿ ಮಾಡಲಾಗಿದೆ. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ, ಬುಧವಾರದಂದು ಲೋಕಾಯುಕ್ತ ತನಿಖೆಗೆ ಆದೇಶಿಸಿತ್ತು. ಮೂಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ವಿರುದ್ಧ ಬಿಜೆಪಿ ವಾಗ್ದಾಳಿ ನಡೆಸಿದೆ. ಬಿಜೆಪಿ ವಕ್ತಾರ ಶೆಹಜಾದ್ ಪೂನಾವಾಲ ಅವರು, ನವದೆಹಲಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ ಸಿಬಿಐ ತನಿಖೆಯಿಂದ ಪಾರಾಗಲು ಯತ್ನಿಸುತ್ತಿದೆ ಎಂದು ಆಪಾದಿಸಿದರು.

<><*<><>*><>

ಪ್ರಸ್ತುತ ಹಣಕಾಸು ವರ್ಷದಲ್ಲಿ ದೇಶ ೬ ಪಾಯಿಂಟ್ ೫ ರಿಂದ ೭ ರಷ್ಟು ಒಟ್ಟು ದೇಶೀಯ ಉತ್ಪನ್ನ- ಜಿಡಿಪಿ ಬೆಳವಣಿಗೆ ಸಾಧಿಸಲಿದೆ ಎಂದು ಹಣಕಾಸು ಸಚಿವಾಲಯ ತಿಳಿಸಿದೆ. ಪ್ರಸಕ್ತ ಹಣಕಾಸು ವರ್ಷದ ಮೊದಲ ಮೂರು ತಿಂಗಳಲ್ಲಿ ಎಲ್ಲ ಪ್ರಮುಖ ಕೃಷಿಯೇತರ ವಲಯ ಶೇಕಡ ೫ಕ್ಕೂ ಹೆಚ್ಚು ಬೆಳವಣಿಗೆ ಕಂಡಿದ್ದು, ಆರ್ಥಿಕತೆ ಚಲನಶೀಲವಾಗಿದೆ ಎಂದು ಹಣಕಾಸು ಸಚಿವಾಲಯದ ಆಗಸ್ಟ್ ತಿಂಗಳ ಆರ್ಥಿಕ ಪರಿಶೀಲನಾ ವರದಿ ತಿಳಿಸಿದೆ. ಆಗಸ್ಟ್ ತಿಂಗಳಿನಲ್ಲಿ ಚಿಲ್ಲರೆ ಹಣದುಬ್ಬರ ಶೇಕಡ ೩ ಪಾಯಿಂಟ್ ೭ರಷ್ಟು ಸಾಧಾರಣ ಪ್ರಮಾಣದಲ್ಲಿದೆ. ವಿಶ್ವ ವ್ಯಾಪಾರ ಹಾಗೂ ಜಾಗತಿಕ ಆರ್ಥಿಕ ವಲಯದಲ್ಲಿ ಉಂಟಾಗಿರುವ ಅನಿಶ್ಚಿತತೆ ಬಗ್ಗೆಯೂ ಪರಿಶೀಲನಾ ವರದಿ ಎಚ್ಚರಿಸಿದೆ.

<><*<><>*><>

ಉತ್ತರಪ್ರದೇಶ ಹಾಗೂ ಮಹಾರಾಷ್ಟ್ರದಲ್ಲಿ ಭಾರೀ ಮಳೆಯಾಗುತ್ತಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ. ಉತ್ತರಪ್ರದೇಶದ ಕೇಂದ್ರೀಯ, ಪೂರ್ವಾಂಚಲ್ ಮತ್ತು ತಾರೈ ವಲಯಗಳಲ್ಲಿ ನಿನ್ನೆಯಿಂದಲೂ ಧಾರಕಾರ ಮಳೆ ಸುರಿಯುತ್ತಿದೆ. ಈ ಪ್ರದೇಶದ ವ್ಯಾಪ್ತಿಯಲ್ಲಿರುವ ಶಾಲೆಗಳಿಗೆ ನಾಳೆವರೆಗೆ ರಜೆ ನೀಡಲಾಗಿದೆ. ಭಾರೀ ಮಳೆಯಿಂದಾದ ಅನಾಹುತದಿಂದಾಗಿ ಉತ್ತರಪ್ರದೇಶದಲ್ಲಿ ಕನಿಷ್ಠ ಐವರು ಮೃತಪಟ್ಟಿದ್ದಾರೆ. ವಿವಿಧ ಪ್ರದೇಶಗಳು ಜಲಾವೃತಗೊಂಡಿದ್ದು, ರಸ್ತೆ ಸಂಚಾರಕ್ಕೆ ವ್ಯತ್ಯಯ ಉಂಟಾಗಿದೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು, ಹಿರಿಯ ಅಧಿಕಾರಿಗಳೊಂದಿಗೆ ಇಂದು ಸಭೆ ನಡೆಸಿ ಪರಿಸ್ಥಿತಿ ಪರಿಶೀಲಿಸಿದರು. ಮುಂಬೈನಲ್ಲಿ ಇಂದು ಮುಂಜಾನೆಯಿಂದಲೂ ಮಳೆ ಸುರಿಯುತ್ತಿದೆ. ಮುಂಬೈ, ಮುಂಬೈ ಉಪನಗರ ಪ್ರದೇಶಗಳಲ್ಲಿ ಕಳೆದ ೨೪ ತಾಸುಗಳಲ್ಲಿ ೪೩ ಮಿಲಿಮೀಟರ್ ಹಾಗೂ ೭೩.೯ ಮಿಲಿಮೀಟರ್ ಮಳೆಯಾಗಿದೆ. ಅಂದೇರಿ, ಸಿಯೋನ್, ಕುರ್ಲಾ ಮತ್ತು ದಾದರ್ ಕೆಳ ಪ್ರದೇಶಗಳಲ್ಲಿ ನೀರು ನಿಂತಿದ್ದು, ರಸ್ತೆ ಸಂಚಾರಕ್ಕೆ ಅಡ್ಡಿ ಉಂಟಾಗಿದೆ ಎಂದು ನಮ್ಮ ಮುಂಬೈ ಪ್ರತಿನಿಧಿ ವರದಿ

ಮಾಡಿದ್ದಾರೆ.  ಈ ಮಧ್ಯೆ ಭಾರತೀಯ ಹವಾಮಾನ ಇಲಾಖೆ, ಪೂರ್ವ ಭಾರತ ಹಾಗೂ ಪಶ್ಚಿಮ ಭಾರತ ಪ್ರದೇಶಗಳಲ್ಲಿ ಮುಂದಿನ ಎರಡು ದಿನಗಳ ಕಾಲ ಮಳೆ ಮುಂದುವರಿಯಲಿದೆ ಎಂದು ಮುನ್ಸೂಚನೆ ನೀಡಿದೆ. ಹಿಮಾಚಲ ಪ್ರದೇಶ, ಪಂಜಾಬ್, ಹರಿಯಾಣ, ಛಂದೀಗಢ್, ದೆಹಲಿ, ರಾಜಸ್ಥಾನ ಮತ್ತು ಉತ್ತರಪ್ರದೇಶದ ಪಶ್ಚಿಮ ಭಾಗಗಳಲ್ಲಿ ಮುಂದಿನ ಮೂರು ನಾಲ್ಕು ದಿನಗಳಲ್ಲಿ ಹಗುರದಿಂದ ಸಾಧಾರಣ ಮಳೆಯಾಗಲಿದೆ ಎಂದು ಇಲಾಖೆ ತಿಳಿಸಿದೆ.

<><*<><>*><>

ಭಾರತದ ತ್ರೀಷಾ ಜೋಲಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿ, ಮೆಕಾವ್ ಮುಕ್ತ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನ ಸೆಮಿಫೈನಲ್ಸ್ ಪ್ರವೇಶಿಸಿದೆ. ಇಂದು ನಡೆದ ಪಂದ್ಯದಲ್ಲಿ ಭಾರತದ ಈ ಜೋಡಿ ತೈವಾನಿನ ಸು-ಹಿನ್-ಹುಯ್ ಮತ್ತು ವು-ಲೂವ್-ಯು ಜೋಡಿಯನ್ನು ೨೧-೧೨, ೨೧-೨೭ ಅಂತರದಿಂದ ಪರಾಭವಗೊಳಿಸಿತು. ಭಾರತದ ಜೋಡಿ, ನಾಳೆ ನಡೆಯಲಿರುವ ಸೆಮಿಫೈನಲ್ಸ್ ಪಂದ್ಯದಲ್ಲಿ ತೈವಾನಿನ ಮತ್ತೊಂದು ಜೋಡಿಯನ್ನು ಎದುರಿಸಲಿದೆ. ಪುರುಷರ ಸಿಂಗಲ್ಸ್‌ನ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಇಂದು ಕಿಡಂಬಿ ಶ್ರೀಕಾಂತ್ ಪರಾಭವಗೊಂಡರು. ಹಾಕಾಂಗ್‌ನ  ಅಂಗೂಸ್ ನಗ್ ಕ ಲೋಂಗ್, ಶ್ರೀಕಾಂತ್ ಅವರನ್ನು ೨೧-೧೬, ೨೧-೧೨ ಅಂತರದಿಂದ ಸೋಲಿಸಿದರು.

<><*<><>*><>

ಕಾನ್ಪುರದಲ್ಲಿ ನಡೆಯುತ್ತಿರುವ ಎರಡನೇ ಟೆಸ್ಟ್ ಕ್ರಿಕೆಟ್ ಪಂದ್ಯದ ಮೊದಲ ದಿನವಾದ ಇಂದು ಭಾರತದ ವಿರುದ್ಧ ಬಾಂಗ್ಲಾದೇಶ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ ೩ ವಿಕೆಟ್ ನಷ್ಟಕ್ಕೆ ೧೦೭ ರನ್ ಗಳಿಸಿದೆ. ಭಾರೀ ಮಳೆಯ ಕಾರಣ ಇಂದು ಮಧ್ಯಾಹ್ನದ ಆಟ ಸಾಧ್ಯವಾಗಲಿಲ್ಲ.  ದಿನದ ಆಟದ ಮುಕ್ತಾಯಕ್ಕೆ ಬಾಂಗ್ಲಾದೇಶದ ಮೊಮಿನುಲ್ ಹಖ್ ೪೦ ಮತ್ತು ಮುಶ್‌ಫಿಖರ್ ರಹೀಮ್ ೬ ರನ್ ಗಳಿಸಿ ಕಣದಲ್ಲಿದ್ದರು.  ಭಾರತದ ಆಕಾಶದೀಪ್ ೨ ಹಾಗೂ ರವಿಚಂದ್ರನ್ ಅಶ್ವಿನ್ ೧ ವಿಕೆಟ್ ಪಡೆದರು. ಇಂದು ಬೆಳಗ್ಗೆ ಭಾರೀ ಮಳೆ ಕಾರಣ, ಆಟ ತಡವಾಗಿ ಆರಂಭವಾಯಿತು. ಟಾಸ್ ಗೆದ್ದ ಭಾರತ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಬಾಂಗ್ಲಾದೇಶ ತಂಡ ೨ನೇ ಟೆಸ್ಟ್‌ನಲ್ಲಿ ೨ ಬದಲಾವಣೆಗಳನ್ನು ಮಾಡಿದೆ. ತೈಜುಲ್ ಇಸ್ಲಾಮ್ ಮತ್ತು ಖಲೀದ್ ಅಹಮದ್ ಬದಲಿಗೆ ರಾಹೀದ್ ರಾಣ ಮತ್ತು ಟಸ್ಕಿನ್ ಅಹಮದ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ  <>*><>**